# ನಿಧಾನಗತಿ ಕಲಿಕೆಯ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಯಲ್ಲಿ ಕನಿಷ್ಠ 35+ ರಿಂದ 81+ ಅಂಕಗಳನ್ನು ಗಳಿಸಲು ತಯಾರಿಸಿದ ಪ್ರಮುಖ 10 ಅಂಶಗಳ ಕ್ರಿಯಾ ಯೋಜನೆ

## 1.ಕವಿ ಪರಿಚಯ (3*2=6)

| ಕ್ರ. | ಪಾಠದ ಹೆಸರು | ಲೇಖಕರ/ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಯುದ್ಧ | ಸಾರಾ ಅಬೂಬಕ್ಕರ್ | 1936 | ಕಾಸರಗೋಡು | ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಚಪ್ಪಲಿಗಳು, | ನೃಪತುಂಗ ಪ್ರಶಸ್ತಿ |
| 2 | ಶಬರಿ | ಪು. ತಿ. ನರಸಿಂಹಾಚಾರ್ | 1905 | ಮಂಡ್ಯ ಜಿಲ್ಲೆಯ ಮೇಲುಕೋಟೆ | ಶಬರಿ ಗೀತ ನಾಟಕ, ಶ್ರೀಹರಿ ಚರಿತೆ, ಹಂಸ ದಮಯಂತಿ | ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ |
| 3 | ಲಂಡನ್ ನಗರ | ಡಾ. ವಿ. ಕೃ. ಗೋಕಾಕ್ | 1909 | ಹಾವೇರಿ ಜಿಲ್ಲೆಯ ಸವಣೂರು | ಜೀವನಪಾಠಗಳು,ಸಮುದ್ರಗೀತೆಗಳು, ಭಾರತ ಸಿಂಧೂರಶ್ಮಿ | ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, |
| 4 | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | ಡಿ. ಎಸ್. ಜಯಪ್ಪಗೌಡ | 1947 | ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ | ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯಸಾಧನೆಗಳು,ಕರ್ನಾಟಕದ ಕಡಲಾಚೆಯ ಸಂಪರ್ಕಗಳು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನ |
| 5 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | 1948 | ಮೈಸೂರು ಜಿಲ್ಲೆಯ ದೇವನೂರು | ಎದೆಗೆ ಬಿದ್ದ ಅಕ್ಷರ, ಕುಸುಮ ಬಾಲೆ, ದ್ಯಾವನೂರು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 6 | ವ್ಯಾಘ್ರಗೀತೆ | ಎ. ಎನ್. ಮೂರ್ತಿರಾವ್ | 1900 | ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು | ದೇವರು, ಅಪರ ವಯಸ್ಕನ ಅಮೆರಿಕಾ ಯಾತ್ರೆ. | ಪಂಪ ಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸಿ |
| 7 | ವೃಕ್ಷಸಾಕ್ಷಿ | ದುರ್ಗಸಿಂಹ | 1031 | ಕಿಸುಕಾಡು ನಾಡಿನ ಸಯ್ಯಡಿ | ಕರ್ನಾಟಕ ಪಂಚತಂತ್ರ | |
| 8 | ಸುಕುಮಾರಸ್ವಾಮಿಯ ಕಥೆ | ಶಿವಕೋಟ್ಯಾಚಾರ್ಯ | 10ನೆಯ | ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಕೋಗಳಿ | 'ವಡ್ಡಾರಾಧನೆ | |
| 1 | ಸಂಕಲ್ಪಗೀತೆ | ಡಾ. ಜಿ. ಎಸ್. ಶಿವರುದ್ರಪ್ಪ | 1926 | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ | ಎದೆ ತುಂಬಿ ಹಾಡಿದೆನು, ಸಾಮಗಾನ, ಚೆಲುವು | ರಾಷ್ಟ್ರಕವಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ. |
| 2 | ಹಕ್ಕಿ ಹಾರುತಿದೆ ನೋಡಿದಿರಾ | ದ. ರಾ. ಬೇಂದ್ರೆ | 1896 | ಧಾರವಾಡ | ಗರಿ, ನಾಕುತಂತಿ, ನಾದಲೀಲೆ | ಪದ್ಮಶ್ರೀ, ಭಾರತೀಯ ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. |
| 3 | ಕೌರವೇಂದ್ರನ ಕೊಂದೆ ನೀನು | ಕುಮಾರ ವ್ಯಾಸ | 1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ಣಾಟ ಭಾರತ ಕಥಾಮಂಜರಿ | |
| 4 | ಹಸುರು | ಕುವೆಂಪು | 1904 | ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಕುಪ್ಪಳಿ | ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಕಾನೂರು ಹೆಗ್ಗಡತಿ, | ಭಾರತೀಯ ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ, ರಾಷ್ಟ್ರಕವಿ,ಪಂಪ, ಪದ್ಮವಿಭೂಷಣ |
| 5 | ಛಲಮನೆ ಮೆರೆವೆಂ | ರನ್ನ | 949 | ಬಾಗಲಕೋಟೆ ಜಿಲ್ಲೆಯ ಮುದುವೊಳಲು | 'ಸಾಹಸ ಭೀಮವಿಜಯಂ' 'ಅಜಿತತೀರ್ಥಂಕರ ಪುರಾಣತಿಲಕಂ', 'ಪರಶುರಾಮಚರಿತಂ', 'ಚಕ್ರೇಶ್ವರಚರಿತಂ' | 'ಕವಿಚಕ್ರವರ್ತಿ, ರತ್ನತ್ರಯ |
| 6 | ವೀರಲವ | ಲಕ್ಷ್ಮೀಶ | 1550 | ಚಿಕ್ಕಮಗಳೂರು ಜಿಲ್ಲೆಯ ದೇವನೂರು | ಜೈಮಿನಿ ಭಾರತ | ಉಪಮಾಲೋಲ, ಕರ್ನಾಟಕವಿ ಚೂತವನ ಚೈತ್ರ |
| 7 | ಕೆಮ್ಮನೆ ಮೀಸೆವೊತ್ತನೇ | ಪಂಪ | 941 | ವೆಂಗಿಪಳು | ಆದಿಪುರಾಣ, ವಿಕ್ರಮಾರ್ಜುನ ವಿಜಯಂ | ಕವಿತಾ ಗುಣಾರ್ಣವ, ಸರಸ್ವತೀ ಮಣೀಹಾರ,ಸಂಸಾರಸಾರೋದಯ |

ಶ್ರೀ ______________________ ಅವರು ಕ್ರಿ. ಶ. __________ ರಲ್ಲಿ____________________________ಎಂಬಲ್ಲಿ ಜನಿಸಿದರು. ಇವರು ____________ ______________ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ____________________________ಪ್ರಶಸ್ತಿ/ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

**2.ವ್ಯಾಕರಣಾಂಶಗಳು** (14 ಅಂಕಗಳು)

**ಕನ್ನಡ ವರ್ಣಮಾಲೆ – 49 ಸ್ವರಗಳು – 13 ಯೋಗವಾಹಗಳು – 2 ವ್ಯಂಜನಗಳು – 34 ,**

| ಸ್ವರಗಳು 13 | | ಯೋಗವಾಹಕಗಳು 02 | | ವರ್ಗೀಯ ವ್ಯಂಜನ 25 | | ಅವರ್ಗೀಯ | |
|---|---|---|---|---|---|---|---|
| **ಹ್ರಸ್ವಸ್ವರ 06** | **ದೀರ್ಘಸ್ವರ 07** | **ಅನುಸ್ವಾರ 01** | **ವಿಸರ್ಗ 01** | **ಅಲ್ಪಪ್ರಾಣ 10** | **ಮಹಾಪ್ರಾಣ 10** | **ಅನುನಾಸಿಕ 05** | **ವ್ಯಂಜನಗಳು 09** |
| ಅ | ಆ | | | ಕ್–ಗ್ | ಖ್–ಘ್ | ಙ್ | ಯ್ –ರ್ |
| ಇ | ಈ | | | ಚ್–ಜ್ | ಛ್–ಝ್ | ಞ್ | ಲ್–ವ್ |
| ಉ | ಊ | ಅಂ | ಅಃ | ಟ್–ಡ್ | ಠ್–ಢ್ | ಣ್ | ಶ್–ಸ್ |
| ಋ | ಏ–ಐ | | | ತ್–ದ್ | ಥ್–ಧ್ | ನ್ | ಷ್–ಹ್ |
| ಎ–ಒ | ಓ–ಔ | | | ಪ್–ಬ್ | ಫ್–ಭ್ | ಮ್ | ಳ್ |

**ಪೂರ್ಣವಿರಾಮ : –** ( . ) ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ 'ಪೂರ್ಣವಿರಾಮ' ಚಿಹ್ನೆಯನ್ನು ಬಳಸಬೇಕು.

**ಅರ್ಧವಿರಾಮ ಚಿಹ್ನೆ :–** ( ; ) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾಹರಣೆ :** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ ಚಿಹ್ನೆ :–** ( , ) ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ ಈ ಚಿಹ್ನೆಯನ್ನು ಬಳಸಬೇಕು. **ಉದಾಹರಣೆ :** ಬಟ್ಟೆ ಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ ಚಿಹ್ನೆ :–** ( ? ) ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ 'ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.

**ಭಾವಸೂಚಕ ಚಿಹ್ನೆ :–** ( ! ) ಹರ್ಷ, ಅಶ್ಚರ್ಯ, ಸಂತೋಷ, ವಿಷಾದ, ದುಃಖ, ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಕೆ.

**ಉದಾಹರಣೆ :** ಅಯ್ಯೋ ! ಹೀಗಾಗಬಾರದಿತ್ತು !

**ಉದ್ಧರಣ ಚಿಹ್ನೆ :–** ( , , ) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ. ಬರೆಯುವಾಗ 'ಉದ್ಧರಣ ಚಿಹ್ನೆಯನ್ನು ಬಳಸಲಾಗುವುದು.

**ಉದಾಹರಣೆ :** 'ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ, ಪ್ರಗತಿಪರ ರಾಜ್ಯದಲ್ಲಿ, ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಸರ್. ಎಂ.ವಿಶ್ವೇಶ್ವರಯ್ಯ ಅವರು ಹೇಳಿದರು.

**ವಾಕ್ಯವೇಷ್ಟನ• ಚಿಹ್ನೆ :–** ( ' ' ) ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ 'ವಾಕ್ಯವೇಷ್ಟನ• ಚಿಹ್ನೆಯನ್ನು ಬಳಸಲಾಗುವುದು.

**ಉದಾಹರಣೆ :** ಕನ್ನಡದಲ್ಲಿ 'ಇಂಗ್ಲಿಷ್', 'ಪರ್ಷಿಯನ್', 'ಪೋರ್ಚುಗೀಸ್' ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ :–** ( ) ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ 'ಆವರಣ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾಹರಣೆ :**ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್), ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ :–** ( :– ) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

## ಸಂಧಿಗಳು

| ಪೂರ್ವ ಪದದ ಕೊನೆಯಾಕ್ಷರದ ಸ್ವರಾಕ್ಷರ ಲೋಪ | ಸಂಧಿ ಮಾಡುವಾಗ ಅರ್ಥ ಕೆಡುವಂತಿದ್ದರೆ 'ಯ' 'ವ' ಕಾರ ಅಗಮ | ಉತ್ತರ ಪದದ ಆದಿಯ ಕತಪ ಗಳಿಗೆ ಗದಬ ಗಳು ಆದೇಶ |
|---|---|---|
| ಊರೂರು **ಬಲ್ಲೆನೆಂದು** ಮಾತಂತು **ಸಂಪನ್ನರಾದ** ಕಾಣಲಾಗದು **ತಪ್ಪಲೀಯದೆ** ಬಂದಲ್ಲದೆ **ತಕ್ಕನಿತು** ಪೂಳ್ದಡೆ **ಇರುಳಳಿದು** ತೆರೆದಿಕ್ಕುವ **ಮನದೊಳಗೆ** ಚರಿಸುತದ್ವರದ **ಲೇಖನವನೋದಿ** ನಿಂತಿರ್ದನು **ಕಾದಾಟದಾಟ** ಆದನೆಂಬ **ನೆತ್ತರೊಂದೆ** ತೆಗೆದುತ್ತರೀಯಮಂ **ಬೇಡಬೇಡರಸುಗಳ** | ಕೈಯನ್ನು **ಮಳೆಯಿಂದ** ಶಾಲೆಯಲ್ಲಿ **ಮರವನ್ನು** ಮಗುವಿಗೆ **ಭೇದವಿಲ್ಲ** ವೃದ್ಧಿಯಾಗಿ **ಭೇದವಾಗಿ** ಮನೆಯೊಳಗೆ **ಶವವಾದವು** | ಮಳೆಗಾಲ **ಮೈದೋರು** ಬೆಂಬತ್ತು **ಕೈವಿಡಿದು** ಧೃತಿಗೆಟ್ಟು **ಪೋಗಲ್ವೇಳ್ಕುಂ** ಹೊಸಗಾಲ |
| **ಸವರ್ಣಧೀರ್ಘ ಸಂಧಿ** | **ಗುಣ ಸಂಧಿ** | **ವೃದ್ಧಿ ಸಂಧಿ** |
| **ಅ+ಆ=ಆ, ಇ+ಈ=ಈ, ಉ+ಊ=ಊ.** | **ಅಆ+ಇಈ=ಏ, ಅಆ+ಉಊ=ಓ, ಅಆ+ಋ=ಅರ್ (ರ್)** | **ಅಆ+ಎಏ=ಐ, ಅಆ+ಒಓ=ಔ** |
| ಮಹಾತ್ಮ ಗಿರೀಶ ಸುರಾಸುರ **ವಧೂಪೇತ** ಸಕಳಾಚಾರ್ಯ **ಜಿನಾಲಯ** ಚಂದ್ರಾರ್ಕ **ನಿಜಾಶ್ರಮ** | ದೇವೇಂದ್ರ **ಜ್ಞಾನೇಶ್ವರ** ಸೂರ್ಯೋದಯ **ಮಹರ್ಷಿ** ಮಹೇಶ **ಮಂಡಳೇಶ್ವರ** ಕಲೋಪಾಸಕ | ಏಕೈಕ **ಜನೈಕ್ಯ** ವನೌಷಧಿ **ಅಷ್ಟೈಶ್ವರ** |
| **'ಯಣ್ ಸಂಧಿ'** | **'ಜಶ್ತ್ವ ಸಂಧಿ'** | **'ಶ್ಚುತ್ವ ಸಂಧಿ'** |
| **ಇಈ+ಅಆ,ಉಊ=ಯ (್ಯ)ಕಾರ**<br>**ಉಊ+ಅಆ,ಇಈ=ವ (್ವ)ಕಾರ**<br>**ಋ+ಅಆ,ಇಈ=ರ್(್ರ)ಕಾರ** | **ಪೂರ್ವ ಪದದ ಕೊನೆಯಲ್ಲಿ ಕಚಟತಪ ಗಳಿಗೆ ಗಜಡದಬ ಗಳು ಆದೇಶ** | **ಸ, ತವರ್ಗ + ಶ, ಚವರ್ಗ ಆದೇಶ** |
| ಅತ್ಯವಸರ **ಕೋಟ್ಯಧೀಶ್ವರ** ಕೋಟ್ಯನುಕೋಟಿ **ಜಾತ್ಯತೀತ** | ವಾಗ್ದೇವಿ **ಅಜಂತ** ಷಂಡಾನನ **ದಿಗಂತ** ಅಬ್ಧಿ | ಪಯಶ್ಶಯನ **ಶರಚ್ಚಂದ್ರ** ಜಗಜ್ಜ್ಯೋತಿ **ಬೃಹಚ್ಛತ್ರ** |

| **ಅನುನಾಸಿಕ** | **ವಿಸರ್ಗ** |
|---|---|
| **ಪೂರ್ವ ಪದದ ಕೊನೆಯಲ್ಲಿ ಕಚಟತಪ ಗಳಿಗೆ ಅನುಕ್ರಮವಾಗಿ 'ಙಞಣನಮ' ಗಳು ಆದೇಶ** | **ಪೂರ್ವ ಪದದ ಕೊನೆಯಲ್ಲಿ 'ರ್(ರೇಫ್)' ಗೆ 'ಃ' ಆದೇಶ** |
| ಷಣ್ಮುಖ **ಸನ್ಮಾನ** ವಾಙ್ಮಯ **ಉನ್ಮಾದ** ತನ್ಮಯ **ಶ್ರೀಮನ್ಮಹಾ** | ಅಂತಃಪುರ, **ಅಂತಃಫಲ**, ಅಂತಃಕರಣ, **ಪುನಃಪರೀಕ್ಷೆ**, ತಪಃಫಲ |

**ದ್ವಿರುಕ್ತಿ,** ಅರ್ಥಗರ್ಭಿತ ಒಂದು ಪದಭಾಗವನ್ನು **ಎರಡೆರಡು** ಬಾರಿ ಉಪಯೋಗಿಸುವುದಕ್ಕೆ **ದ್ವಿರುಕ್ತಿ** ಎನ್ನುತ್ತಾರೆ.

ಹೌದುಹೌದು ನಿಲ್ಲುನಿಲ್ಲು ಬಂದೆಬಂದೆ ದೊಡ್ಡದೊಡ್ಡ. ಹೆಚ್ಚುಹೆಚ್ಚು ಮನೆಮನೆ ಕೇರಿಕೇರಿ ಊರೂರು ನಿಲ್ಲುನಿಲ್ಲು. ಎಲೇಎಲೇ ಬನ್ನಿಬನ್ನಿ ಹತ್ತಿರಹತ್ತಿರ. ಅಗೋಅಗೋ ಅಬ್ಬಬ್ಬಾ! ಆಹಾಹಾ ಬೇಡಬೇಡ ಕೊಡುಕೊಡು ನಡೆನಡೆ ಅಮ್ಮಾಅಮ್ಮಾ ಆಗಲಿಆಗಲಿ ಬೇಗಬೇಗ ನಡೆನಡೆ ಓಡುಓಡು ಒಬ್ಬೊಬ್ಬ ಅಯ್ಯೋಅಯ್ಯೋ, ದೇವರೆದೇವರೇ ನೋಡಿನೋಡಿ ಹಾವುಹಾವು, ಕೆಟ್ಟೆಕೆಟ್ಟೆ, ಬೆಂಕಿಬೆಂಕಿ. ದುರುಳಾದುರುಳಾ ಸಾಕುಸಾಕು ಈಗೀಗ ತಿರುತಿರುಗಿ

ಜೋಡಿನುಡಿ ಒಂದು ಪದದ ಜೊತೆ ಪ್ರಾಸಕ್ಕಾಗಿ ಬಳಸುವುದುಂಟು. ಆ ಪದವನ್ನು ಜೋಡಿಪದ ಎನ್ನುವರು

ಸತಿಪತಿ ಕೆನೆಮೊಸರು ಹಾಲ್ಜೇನು ಮಕ್ಕಳುಮರಿ ಹುಳಹುಪ್ಪಡಿ ಸೊಪ್ಪುಸದೆ ಬಟ್ಟೆಬರೆ

ಅನುಕರಣಾವ್ಯಯ ಅರ್ಥವಿಲ್ಲದ ಧ್ವನಿವಿಶೇಷಗಳನ್ನು ಅನುಕರಣಾವ್ಯಯಗಳು ಎನ್ನಲಾಗುತ್ತದೆ

ಗುಜುಗುಜು ಜುಳುಜುಳು ಸರಸರ ಚಟಚಟ ಝುಣಝುಣ ದಡದಡ ಘಮಘಮ ಘುಳುಘುಳು ಧಗಧಗ ರೊಯ್ಯನೆ ಪಟಪಟ ಸುಯ್ಯನೆ ಫಳಫಳ ಲಕಲಕ ಢಣಢಣಚುಮುಚುಮು

| ಕ್ರ. ಸಂ | ವಿಭಕ್ತಿಯ ಹೆಸರು | ಹಳಗನ್ನಡದ ವಿಭಕ್ತಿ ಪ್ರತ್ಯಯ | ಹೊಸಗನ್ನಡದ ವಿಭಕ್ತಿ ಪ್ರತ್ಯಯ | ಕಾರಕಾರ್ಥ | ಹೊಸಗನ್ನಡ ಪದರೂಪಗಳು | ಹಳಗನ್ನಡ ಪದರೂಪಗಳು |
|---|---|---|---|---|---|---|
| 1 | ಪ್ರಥಮ | ಮ್ | ಉ | ಕರ್ತೃ | ಸಾವಿತ್ರಿಯು | ಸಾವಿತ್ರಿ |
| 2 | ದ್ವಿತೀಯಾ | ಅಮ್ | ಅನ್ನು | ಕರ್ಮ | ಸಾವಿತ್ರಿಯನ್ನು | ಸಾವಿತ್ರಿಯಂ |
| 3 | ತೃತೀಯಾ | ಇಮ್ | ಇಂದ | ಕರಣ | ಸಾವಿತ್ರಿಯಿಂದ | ಸಾವಿತ್ರಿಯಿಂ |
| 4 | ಚತುರ್ಥೀ | ಗೆ/ಇಗೆ/ಕೆ/ಕ್ಕೆ | ಗೆ/ಕೆ/ಕ್ಕೆ | ಸಂಪ್ರದಾನ | ಸಾವಿತ್ರಿಗೆ | ಸಾವಿತ್ರಿಂಗೆ |
| 5 | ಪಂಚಮೀ | ಅತ್ತಣಿಂ | ದೆಸೆಯಿಂದ | ಅಪಾದಾನ | ಸಾವಿತ್ರಿಯ ದೆಸೆಯಿಂದ | ಸಾವಿತ್ರಿಯತ್ತಣಿಂ |
| 6 | ಷಷ್ಠೀ | ಅ | ಅ | ಸಂಬಂಧ | ಸಾವಿತ್ರಿಯ | ಸಾವಿತ್ರಿಯ |
| 7 | ಸಪ್ತಮೀ | ಒಳ್ | ಅಲ್ಲಿ | ಅಧಿಕರಣ | ಸಾವಿತ್ರಿಯಲ್ಲಿ | ಸಾವಿತ್ರಿಯೊಳ್ |

**ಅನ್ಯದೇಶಿ ಪದಗಳು:**

| ಗ್ರೀಕ್ & ರೋಮನ್ | ಪಾರ್ಶಿ | ಅರಬ್ಬಿ | ಪೋರ್ಚುಗೀಸ್ | ಉರ್ದು | ಹಿಂದುಸ್ಥಾನಿ | ಇಂಗ್ಲೀಷ್ | ಗ್ರಾಂಥಿಕ ರೂಪಗಳು: | |
|---|---|---|---|---|---|---|---|---|
| ದಮ್ಮಡಿ, ದಮಡಿ,<br>ದಮ್ಮ, ದಿನಾರ,<br>ಗದ್ಯಾಣ | ಅಬಕಾರಿ, ರಸ್ತೆ,<br>ದವಾಖಾನೆ,<br>ಚೌಕಾಸಿ, ಜಮೀನು,<br>ಅಜಮಾಹಿಸಿ,<br>ಆಮದು, ದಲ್ಲಾಳಿ,<br>ಮಸಲತ್ತು, ದಿವಾನ,<br>ಸರಕಾರ | ಅಮಾನತು,<br>ಅಸಲು, ಇನಾಮು,<br>ಕಾಯ್ದೆ, ಗಲೀಜು,<br>ತಕರಾರು,<br>ತರಬೇತು, ನಕಲಿ | ಮೇಜು, ತಂಬಾಕು,<br>ಅನಾನಸು,<br>ಸಾಬೂನು, ಆಸ್ಪತ್ರೆ,<br>ಚೊಂಬು, ಇಸ್ತ್ರಿ,<br>ರಸೀದಿ, ಚಾ | ಕಿಮ್ಮತ್ತು, ತಾರೀಖು,<br>ತಾಲೂಕು,<br>ಅಹವಾಲು, ಇಲಾಖೆ,<br>ದರ್ಜೆ, ಬಂದೂಕು,<br>ರುಜು, ಶುರು,<br>ಶಾಮೀಲು, ದಾಖಲೆ,<br>ಜುಲ್ಮಾನೆ | ಅರ್ಜಿ, ಕಛೇರಿ,<br>ಕಾರ್ಖಾನೆ,<br>ಸಲಾಮು,<br>ದರ್ಬಾರು, ಕುರ್ಚಿ,<br>ಕಾಗದ, ಹುಕುಂ | ಬಸ್ಸು, ಕಾರು<br>ಕಾಲೇಜು, ನೈಟು,<br>ಪೆನ್ನು, ಸ್ಯಾನಿಟರಿ,<br>ಸೋಪು,<br>ಡಿಪ್ಲೋಮಾ, ಸ್ವಿಚ್,<br>ಡಿಕ್ರಿ | ಹೀಂಗ<br>ಕಳುವ್ಯಾರೆ<br>ಇಲ್ಲದ್ಹಂಗ<br>ಇಸವಾಸ<br>ಸಕ್ಕಾರಿ<br>ಮ್ಯಾಗ | ಹೀಗೆ<br>ಕಳುಹಿಸಿದ್ದಾರೆ<br>ಇಲ್ಲದಹಾಗೆ<br>ವಿಶ್ವಾಸ<br>ಸಕ್ಕರೆ<br>ಮೇಲೆ |

| ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ |
|---|---|---|---|---|---|---|---|
| ವಿಜ್ಞಾನ >ಬಿನ್ನಾಣ,<br>ದಾತೃ > ದಾತಾರ<br>ವಿಜ್ಞಾಪನೆ > ಬಿನ್ನಹ<br>ಕವಿ > ಕಬ್ಬಿಗ<br>ಭಕ್ತ > ಬಕುತ<br>ತಪಸ್ವಿ > ತವಸಿ | ಸುಧೆ > ಸೊದೆ<br>ತಟ > ತಡಿ<br>ವ್ಯಯ > ಬೀಯ<br>ಶ್ರೀ > ಸಿರಿ<br>ಪುಣ್ಯ > ಹೂನ್ಯ<br>ಶಶಿ > ಶಶಿ | ವಂಶ > ಬಂಚ<br>ಸ್ಥಾನ > ತಾಣ<br>ಯಶ > ಜಶ<br>ಪಟ್ಟಣ > ಪತ್ತನ<br>ಕಾರ್ಯ > ಕಜ್ಜ<br>ವರ್ಷ > ವರುಷ | ಶುನಕ > ಸೊಣಗ,<br>ಧರ್ಮ > ಧಮ್ಮ<br>ಪಕ್ಷಿ > ಹಕ್ಕಿ<br>ಬ್ರಹ್ಮ > ಬೊಮ್ಮ<br>ಚಂದ್ರ > ಚಂದಿರ<br>ವ್ಯಾಪಾರಿ > ಬೇಹಾರಿ | ವೈಶಾಖ > ಬೇಸಗೆ<br>ಪಾದುಕಾ >ಹಾವುಗೆ<br>ವಿದ್ಯಾಧರ ><br>ಬಿಜ್ಜೋಧರ<br>ಮುಖಶಾಲೆ ><br>ಮೊಗಸಾಲೆ | ಸಾಮಂತ > ಸಾವಂತ<br>ಕೋಕಿಲಾ > ಕೋಗಿಲೆ<br>ವಂಧ್ಯಾ > ಬಂಜೆ<br>ವೀರ > ಬೀರ<br>ಅರ್ಕ > ಎಕ್ಕ<br>ಕುಠಾರ > ಕೊಡಲಿ | ಅಮೃತ > ಅಮರ್ದು<br>ಕಾವ್ಯ > ಕಬ್ಬ<br>ಯಜ್ಞ > ಜನ್ನ<br>ದ್ಯೂತ > ಜೂಜು<br>ಕಣಿ > ಗಣಿ<br>ಸಂದೇಹ > ಸಂದೆಯ | ದೃಷ್ಟಿ > ದಿಟ್ಟಿ<br>ಗ್ರಹ > ಗರ<br>ದಿಶೆ > ದಿಶಾ<br>ಅಟವಿ > ಅಡವಿ<br>ಪ್ರಸಾದ > ಹಸಾದ |

| ಪದ | ಅರ್ಥ | ಪದ | ಅರ್ಥ | ಪದ | ಅರ್ಥ | ಪದ | ಅರ್ಥ | ಪದ | ಅರ್ಥ | ಪದ | ಅರ್ಥ | ಪದ | ಅರ್ಥ |
|---|---|---|---|---|---|---|---|---|---|---|---|---|---|
| ಪೆರೆ | ಚಂದ್ರ | ತಡಿ | ತಟ | ಪೈಕಿ | ಸಂಬಂಧಿಕ | ಅನೃತ | ಸುಳ್ಳು | ಅರ್ತಿ | ಪ್ರೀತಿ | ಮಸಲತ್ತು | ಪಿತೂರಿ | ಐಹಿಕ | ನೌಕಿಕ |
| ಅಬ್ಧಿ | ಸಮುದ್ರ | ಅಂದಣ | ಪಲ್ಲಕ್ಕಿ | ಸುರಭಿ | ಕಾಮಧೇನು | ಚೋದ್ಯ | ಆಶ್ಚರ್ಯ | ಕಿಂಕರ | ಸೇವಕ | ಕಾಪು | ರಕ್ಷಣೆ | ಮತ್ತು | ಅಮಲು |
| ಆರ್ತಗೆ | ಬಯಕೆ | ದ್ರುಮ | ಮರ | ಇಂಬು | ಅವಕಾಶ | ಕದಳಿ | ಬಾಳೆ | ಪೆರ್ಮೆ | ಹಿರಿಮೆ | ವಾಜಿ | ಕುದುರೆ | ಸೊದೆ | ಅಮೃತ |
| ಊಣೆಯ | ಕೊರತೆ | ದೃಗಜಲ | ಕಣ್ಣೀರು | ವಿಲಾತಿ | ವಿಲಾಯಿತಿ | ಧೃತಿ | ಧೈರ್ಯ | ಕಸರತ್ತು | ಚಮತ್ಕಾರ | ಬಂಬಲ | ಗುಂಪು | ಉರ್ವಿ | ನೆಲ |
| ನಣ್ಪು | ನಂಟು | ಪವನನಂದನ | ಭೀಮ | ತೃಷೆ | ಬಾಯಾರಿಕೆ | ಕಾಪು | ರಕ್ಷಣೆ | ಕುಟಿಲ | ಮೋಸ | ಉಪಾಸನೆ | ಪೂಜೆ | ಜರ್ಬು | ಭರ್ಜರಿ |

| | | | | | | | |
|---|---|---|---|---|---|---|---|
| ಬೆಸಕ್ಕೈ | ಹೇಳು | ಕುಮಕಿ | ಸಹಾಯಕ | ಇರಿವನ್ನರ್ | ಯುದ್ಧಮಾಡುವವರು | ಕುರುಕುಳನಂದನ | ದುರ್ಯೋಧನ |

**ನಾಮಪದ**

**ಅಂಕಿತನಾಮ** :– ಸಹದೇವ, ಧರ್ಮರಾಯ, ರಾಹುಲ, ಕಮಲಾಕ್ಷ. **ರೂಢನಾಮ** :– ನದಿ, ಪರ್ವತ, ಊರು ದೇಶ, ಮನುಷ್ಯ. **ಅನ್ವರ್ಥನಾಮ** :– ವ್ಯಾಪಾರಿ, ವಿಜ್ಞಾನಿ, ವಿದ್ವಾಂಸ, ಪೂಜಾರಿ.

**ಗುಣವಾಚಕ** :– ಒಳ್ಳೆಯ, ಕೆಟ್ಟ, ದೊಡ್ಡದು, ಹಳತು. **ಸಂಖ್ಯಾವಾಚಕ** :– ಹನ್ನೆರಡು, ಐವತ್ತು, ಎಂಬತ್ತು. **ದಿಗ್ವಾಚಕಗಳು** :– ಮೂಡಣ, ತೆಂಕಣ, ಪಡುವಣ, ಈಶಾನ್ಯ, ಆಗ್ನೇಯ.

**ಪರಿಮಾಣವಾಚಕಗಳು** :– ಅಷ್ಟು, ಎಷ್ಟು, ಹಲವು, ಇನಿತು, ಅನಿತು. **ಭಾವನಾಮಗಳು** :– ಕೆಂಪು, ಹಿರಿಮೆ, ನೋಟ, ಮಾಟ, ಆಟ.

**ಸರ್ವನಾಮಗಳು:**

**ಪುರುಷಾರ್ಥಕ ಸರ್ವನಾಮಗಳು :** **ನಾನು – ನಾವು, ನೀನು – ನೀವು ಅವನು – ಅವರು, ಇವನು – ಇವರು**
**ಅವಳು – ಅವರು, ಇವಳು – ಇವರು ಅದು – ಅವು, ಇದು – ಇವು**

**ಆತ್ಮಾರ್ಥಕ ಸರ್ವನಾಮಗಳು :** **ತಾನು, ತಾವು, ತನ್ನ, ತಮ್ಮ**

**ಪ್ರಶ್ನಾರ್ಥಕ ಸರ್ವನಾಮಗಳು :** **ಯಾರು?, ಯಾವುದು?, ಏನು?**

**ಕ್ರಿಯಾಪದಗಳು:**

| | | **ವಿಧ್ಯರ್ಥಕ ರೂಪ ಕ್ರಿಯಾಪದಗಳು:** | | **ಸಂಭಾವನಾರ್ಥಕ ರೂಪ ಕ್ರಿಯಾಪದಗಳು:** | | **ನಿಷೇದಾರ್ಥಕ ರೂಪ ಕ್ರಿಯಾಪದಗಳು:** | |
|---|---|---|---|---|---|---|---|
| **ಕ್ರ.ಸಂ.** | **ಪುರುಷ** | **ಏಕ ವಚನ** | **ಬಹು ವಚನ** | **ಏಕ ವಚನ** | **ಬಹು ವಚನ** | **ಏಕ ವಚನ** | **ಬಹು ವಚನ** |
| 1 | ಉತ್ತಮ ಪುರುಷ | ಹಾಡುವೆ | ಹಾಡೋಣ | ಹಾಡೇನು | ಹಾಡೇವು | ಹಾಡೆನು | ಹಾಡೆವು |
| 2 | ಮಧ್ಯಮ ಪುರುಷ | ಹಾಡು | ಹಾಡಿರಿ | ಹಾಡೀಯೆ | ಹಾಡೀರಿ | ಹಾಡೆ | ಹಾಡರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | ಹಾಡಲಿ<br>ಹಾಡಲಿ<br>ಹಾಡಲಿ | ಹಾಡಲಿ<br>ಹಾಡಲಿ | ಹಾಡಿಯಾನು<br>ಹಾಡಿಯಾಳು<br>ಹಾಡೀತು | ಹಾಡಿಯಾರು<br>ಹಾಡಿಯಾಳು<br>ಹಾಡಿಯಾವು | ಹಾಡನು<br>ಹಾಡಳು<br>ಹಾಡದು | ಹಾಡರು<br>ಹಾಡರು<br>ಹಾಡವು |

**ಸಮಾಸಗಳು**

| **ತತ್ಪುರುಷ** | **ಕರ್ಮಧಾರಯ** | **ದ್ವಿಗು** | **ಬಹುವ್ರೀಹಿ** | **ಅಂಶಿ** | **ದ್ವಂದ್ವ** | **ಕ್ರಿಯಾ** | **ಗಮಕ** |
|---|---|---|---|---|---|---|---|
| **ಉತ್ತರ ಪದ ಪ್ರಧಾನವಾಗಿರುತ್ತದೆ.** | **ವಿಶೇಷಣ ಹಾಗೂ ವಿಶೇಷ್ಯಗಳ ಸಂಬಂಧದಿಂದ ಕೂಡಿರುತ್ತದೆ.** | **ಪೂರ್ವಪದ ಸಂಖ್ಯಾವಾಚಕ ವಾಗಿರುತ್ತದೆ.** | **ಅನ್ಯಪದದ ಅರ್ಥ ಪ್ರಧಾನವಾಗಿರುತ್ತದ** | **ಅಂಶಾಂಶಿ ಭಾವ ಸಂಬಂಧದಿಂದ ಸೇರುತ್ತವೆ** | **ಪೂರ್ವೋತ್ತರ ಪದಗಳು ಅರ್ಥ ಪ್ರಧಾನವಾಗಿರುತ್ತವೆ** | **ಪೂರ್ವಪದದ ದ್ವಿತೀಯ ವಿಭಕ್ತಿ ಪ್ರತ್ಯೆಯ ಲೋಪವಾಗಿ ಉತ್ತರ ಪದ ಕ್ರಿಯಾಪದವಾಗಿರುತ್ತದೆ.** | **ಪೂರ್ವಪದ ಸರ್ವನಾಮ ಅಥವಾ ಕೃದಂತವಾಗಿ ಉತ್ತರದ ನಾಮಪದಗಳ ಜೊತೆ ಸೇರುತ್ತದೆ.** |
| ಬೆಟ್ಟದಾವರೆ,<br>ತಲೆನೋವು,<br>ದೈವಭಕ್ತಿ,<br>ಸ್ವಾಮಿದ್ರೋಹ,<br>ಪರಧನ, ಪೂದೋಟ,<br>ಕಾಲುಬಳೆ,<br>ಧನದಹರಣ | ಇಮ್ಮಾವು, ಮೆಲ್ವಾತು,<br>ಹೊಸಗನ್ನಡ, ಅತಿಕುಟಿಲ,<br>ಕಟ್ಟೇಕಾಂತ, ಪೆರ್ಮಗ,<br>ಪೆರ್ಮರ, ನಲ್ಲುದುರೆ,<br>ಹೆದ್ದೊರೆ | ಮೂಗಾವುದ,<br>ಮುಕ್ಕಣ್ಣು,<br>ಸಪ್ತಸ್ವರಗಳು,<br>ಒಕ್ಕಣ್ಣು,<br>ಪಂಚೇಂದ್ರಿಯ,<br>ಇಮ್ಮಡಿ | ಹಣೆಗಣ್ಣ, ಮುಕ್ಕಣ್ಣ,<br>ಚಕ್ರಪಾಣಿ, ಅಬ್ಜೋದರ,<br>ಘಟಸಂಭೂತ,<br>ಗಾಂಡೀವಿ,<br>ಪವನನಂದನ,<br>ಮದಾಂಧ,<br>ಇನತನೂಜ,<br>ದನುಜರಿಪು, ಮುರಾರಿ,<br>ಮೇದಿನೀಪತಿ,<br>ರಾಜೀವಸಖ | ಅಂಗೈ,<br>ಹಿಂದಲೆ,<br>ಕಡೆಗಣ್ಣು,<br>ಮುಂಗೈ,<br>ನಡುರಾತ್ರಿ,<br>ನಟ್ಟಡವಿ | ಗಿರಿವನದುರ್ಗಗಳು<br>ಕರಿತುರಗರಥಗಳು,<br>ಹನುಮಭೀಮರಾಮರು,<br>ಸೂರ್ಯಚಂದ್ರರು,<br>ಮಾದ್ರಮಾಗಧಯಾದರು<br>ಕೆರೆಕಟ್ಟೆಬಾವಿಗಳು | ಮೈಮುಚ್ಚು, ಕಣ್ದೆರೆ, ಕಂಗೆಡು,<br>ಕೈಕೊಳ್ವುದು, ಸಾಕ್ಷಿಮಾಡಿ,<br>ಬಲವಂದು, ಮೋಸಮಾಡು,<br>ಕೈಯಾನು, ಹೊಗೆದೋರು,<br>ಸೊಲ್ಗೇಳಿ, ಬಿಲ್ಗೊಂಡು,<br>ಬಿಲ್ದಿರುವನೇರಿಸಿ | ಆ ಕಲ್ಲು, ಈ ಬೆಕ್ಕು,<br>ನೆಯ್ದುವಸ್ತ್ರ , ಬೆಂದಬೇಳೆ,<br>ತಿಂದ ಕೂಳು, ಮಾಡಿದಡುಗೆ,<br>ಸಿಡಿದುದ್ದು. |

**3. ಪ್ರಸ್ತಾರ ಹಾಕಿ ಗಣವಿಂಗಡಿಸಿ ಛಂಧಸ್ಸು ಹೆಸರಿಸಿ. (ಪ್ರಸ್ತಾರ 1 ಗಣ ವಿಂಗಡನೆ 1 ಛಂಧಸ್ಸು ಹೆಸರು 1) 3*1=3**

**ಪದ್ಯ ಪಾಠಗಳಲ್ಲಿ ಬಂದಿರುವ ಛಂದೋಬದ್ಧ ಪದ್ಯಗಳ ಆರಂಭದ ಸಾಲುಗಳನ್ನು ಆರಿಸಿ ಪ್ರಸ್ಥಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರು ಬರೆಯುವುದನ್ನು ಅಭ್ಯಾಸ ಮಾಡಿಸುವುದು.**

1. ಕಂದಪದ್ಯಗಳ ಮೊದಲ ಎರಡುಸಾಲುಗಳು,
2. ಷಟ್ಪದಿಗಳ ಮೊದಲ ಮೂರುಸಾಲುಗಳು,
3. ಖ್ಯಾತಕರ್ಣಾಟಕಗಳ ಮೊದಲ ಒಂದು ಸಾಲನ್ನು ಪಟ್ಟಿಮಾಡಿಸಿ ಅಭ್ಯಾಸಮಾಡಿಸುವುದು.

➢ **ಕಂದಪದ್ಯ**ಗಳ ಮೊದಲ ಎರಡು ಸಾಲುಗಳಲ್ಲಿ ಬರುವುದು. (ವೃಕ್ಷಸಾಕ್ಷಿ, ಛಲಮನೆ ಮೆರೆವೆಂ, ಕೆಮ್ಮನೆ ಮೀಸೆವೊತ್ತನೇ)

**1ನೇ ಸಾಲು 4|4|4| = 12**

**2ನೇ ಸಾಲು 4|4|4|4| = 20**

➢ **ಷಟ್ಪದಿಗಳ ಮೊದಲ ಮೂರುಸಾಲುಗಳು,**

1. ಭಾಮಿನಿ ಷಟ್ಪದಿ (ಕೌರವೇಂದ್ರನ ಕೊಂದೆ ನೀನು) **1ನೇ ಸಾಲು 3|4|3|4| = 14**
**2ನೇ ಸಾಲು 3|4|3|4| = 14**
**3ನೇ ಸಾಲು 3|4|3|4|3|4|ಗುರು = 23**

2. ವಾರ್ಧಕ ಷಟ್ಪದಿ (ವೀರಲವ) **1ನೇ ಸಾಲು 5|5|5|5| = 20**
**2ನೇ ಸಾಲು 5|5|5|5| = 20**
**3ನೇ ಸಾಲು 5|5|5|5|5|5|ಗುರು = 32**

➢ **ಖ್ಯಾತಕರ್ಣಾಟಕಗಳ ಮೊದಲ ಒಂದು ಸಾಲು ಮಾತ್ರ ಪರೀಕ್ಷೆಗೆ ಬರುವುದು ಅಕ್ಷರಗಣದ ವಿಧಗಳು: 8 (ಮನ ಭಯ ಜರ ಸತ)**

**1) ಚಂಪಕಮಾಲಾವೃತ್ತ – 21 ಅಕ್ಷರಗಳು, ನ ಜ ಭ ಜ ಜ ಜ ರ**

**2) ಉತ್ಪಲಮಾಲಾವೃತ್ತ – 20 ಅಕ್ಷರಗಳು, ಭ ರ ನ ಭ ಭ ರ ಲಘು, ಗುರು**

**3) ಮತ್ತೇಭವಿಕ್ರೀಡಿತವೃತ್ತ – 20 ಅಕ್ಷರಗಳು, ಸ ಭ ರ ನ ಮ ಯ ಲಘು, ಗುರು**

**4. ಈ ವಾಕ್ಯವನ್ನು ಸಮನ್ವಯಗೊಳಿಸಿ ಅಲಂಕಾರ ಹೆಸರಿಸಿ. ( ಹೆಸರು–1 ಅಂಕ ಸಮನ್ವಯ –1 ಅಂಕ ಲಕ್ಷಣ –1 ಅಂಕ) 3*1=3**

**1. ಉಪಮಾಲಂಕಾರ (ಅಂತೆ, ಹಾಂಗ, ದ್ಹಾಂಗ, ಹಾಗೆ** ಎಂಬ ಪದಗಳು ಸಾಲಿನಲ್ಲಿ ಎಲ್ಲೆ ಇದ್ದರೂ ಅದನ್ನು ಉಪಮಾಲಂಕಾರ ಎಂದು ಬರೆಯಿರಿ **2. ರೂಪಕಾಲಂಕಾರ**

**1.ಲಕ್ಷಣ : – ಎರಡು ವಸ್ತುಗಳಿಗಿರುವ (ಉಪಮಾನ ಉಪಮೇಯಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಂಕಾರ' ಎನಿಸುತ್ತದೆ.**

**2.ಲಕ್ಷಣ : – ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಂಕಾರ'**

**ಅಲಂಕಾರ:– ––––––––––––––––––––––––––**

**ಉಪಮೇಯ:– –––––––––––––––––––––––––**

**ಉಪಮಾನ :– ––––––––––––––––––––––**

**ಉಪಮಾವಾಚಕ:– ––––––––––––––––––––––**

**ಸಮಾನಧರ್ಮ–:– ––––––––––––––––––––––**

**ಸಮನ್ವಯ:–** ಇಲ್ಲಿ ಉಪಮೇಯವಾದ ––––––––––––ನ್ನು ಉಪಮಾನವಾದ––––––––––––––ಕ್ಕೆ ಪರಸ್ಪರ ಹೋಲಿಸಿರುವುದರಿಂದ ಇದು––––––––––––––– ಆಗಿದೆ.

**'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ'**

**ಅಲಂಕಾರ:–** ಉಪಮಾಲಂಕಾರ

**ಉಪಮೇಯ:–** ಸತಿಪತಿಗಳೊಂದಾಗದವನ ಭಕ್ತಿ **ಉಪಮಾನ:–** ಅಮೃತದೂಳು ಬೆರೆತ ವಿಷ

**ಉಪಮಾವಾಚಕ:–** ಅಂತೆ **ಸಮಾನಧರ್ಮ:** ಬೆರೆತಿರುವುದು

**ಸಮನ್ವಯ:–** ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನು ಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**5.ಕಂಠಪಾಠ ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. ( ಪದ್ಯಭಾಗ 1 ಪ್ರಶ್ನೆ – ಪದ್ಯ 1, 8, ಮತ್ತು ರಲ್ಲಿ (8–10 ವಾಕ್ಯದ ಒಂದು ಪ್ರಶ್ನೆ ಮಾತ್ರ )** **01 * 08 = 08**

**1. ಸಂಕಲ್ಪಗೀತೆ**

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

**2. ಹಕ್ಕಿ ಹಾರುತಿದೆ ನೋಡಿದಿರಾ**

ನೀಲಮೇಘ ಮಂಡಲ ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೋ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**4. ಕೌರವೇಂದ್ರನ ಕೊಂದೆ ನೀನು**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥

**6. ಛಲಮನೆ ಮೆರೆವೆಂ**

ಪುಟ್ಟಿದ ನೂರ್ವರುಮನ್ನೊಡ
ಪುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ
ಪುಟ್ಟಿ ಪೊದಲ್ದುದು ಸತ್ತರ್
ಪುಟ್ಟರೆ ಪಾಂಡವರೊಳಿರೆದು ಛಲಮನೆ ಮೆರೆವೆಂ

**5. ಹಸುರಾಗಸ; ಹಸುರು ಮುಗಿಲು;**
**ಹಸುರು ಗದ್ದೆಯಾ ಬಯಲು;**
**ಹಸುರಿನ ಮಲೆ; ಹಸುರು ಕಣಿವೆ;**
**ಹಸುರು ಸಂಜೆಯೀ ಬಿಸಿಲೂ!**

6. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

7. **ಅಂತೆಂಬನಾರ್ಗೆ ಪಿರಿದುಂ**
**ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ**
**ಚಿಂತೆನಗೆ ಕೆಳೆಯನೇ ನೂಂ**
**ಕಂತಪ್ಪನನಜೆಯೆನೆಂದು ಸಭೆಯೊಳ್ ನುಡಿದಂ**

8. ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

**1. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?**
**2. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?**
**3. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು? ಅಥವಾ ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?**
**4. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.**
**5. ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?**
**6. 'ಹಸುರು' ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.**
**7. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?**
**8. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?**

**6. ಮೌಲ್ಯಾಧರಿತ ಸಾರಾಂಶಕ್ಕೆ** (4 ಅಂಕಗಳು)

**1 ಸಂಕಲ್ಪಗೀತೆಯಿಂದ ಕೊಟ್ಟರೆ ಹೀಗೆ ಬರೆದು ಸಾರಾಂಶ ಬರೆಯಿರಿ–**
ಇದು ಜಿ.ಎಸ್.ಶಿವರುದ್ರಪ್ಪ ಅವರ ಸಂಕಲ್ಪಗೀತೆಯಿಂದ ಆಯ್ದ ಭಾಗ. ಇದರಲ್ಲಿ ಜೀವನದಲ್ಲಿ ಧನಾತ್ಮಕ ಭಾವನೆ ಇರಬೇಕು, ದೃಢಸಂಕಲ್ಪ ಹೊಂದಿರಬೇಕು ಎಂಬ ಮೌಲ್ಯವಿದೆ. ಕವಿ ಆ ಬಗ್ಗೆ ಹೀಗೆಂದು ಹೇಳುತ್ತಾರೆ–

**2 ಹಕ್ಕಿ ಹಾರುತಿದೆ ನೋಡಿದಿರಾ ಪದ್ಯಭಾಗದಿಂದ ಕೊಟ್ಟರೆ ಈ ಕೆಳಗಿನಂತೆ ಪ್ರಾರಂಭಿಸಿರಿ–**
ಇದು ಬೇಂದ್ರೆ ಅವರ ಹಕ್ಕಿ ಹಾರುತಿದೆ ನೋಡಿದಿರಾ ಕವನದ ಒಂದು ಚರಣ. ಇದರಲ್ಲಿ ಕಾಲವನ್ನು ಹಕ್ಕಿಗೆ ಹೋಲಿಸಲಾಗಿದೆ. ನಿಸರ್ಗ ನಿಯಮದಂತೆ ಕಾಲ ಉರುಳುತ್ತದೆ. ಅದಕ್ಕೆ ಎಲ್ಲರೂ ತಲೆಬಾಗಬೇಕೆಂಬ ಮೌಲ್ಯ ಇಲ್ಲಿದೆ. ಕವಿ ಕಾಲವೆಂಬ ಹಕ್ಕಿಯ ಬಗ್ಗೆ ಹೀಗೆಂದು ಹೇಳುತ್ತಾರೆ–

**3 ಕೌರವೇಂದ್ರನ ಕೊಂದೆ ನೀನು ಪದ್ಯಭಾಗದಿಂದ ಕೊಟ್ಟರೆ ಈ ಕೆಳಗಿನಂತೆ ಪ್ರಾರಂಭಿಸಿರಿ–**
ಇದು ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿಯ ಕೌರವೇಂದ್ರನ ಕೊಂದೆ ನೀನು ಎಂಬ ಪದ್ಯಭಾಗದಲ್ಲಿ ಬರುವ ಪದ್ಯ. ಇದರಲ್ಲಿ ಕರ್ಣ ಮತ್ತು ಕೃಷ್ಣನ ನಡುವೆ ನಡೆಯುವ ಮಾತುಕತೆಯಲ್ಲಿ ಕರ್ಣನ ಸ್ವಾಮಿನಿಷ್ಠೆ ವ್ಯಕ್ತವಾಗುತ್ತದೆ. ಸಾಕಿದ ಒಡೆಯನಿಗಾಗಿ ಪ್ರಾಣ ಕೊಡಲೂ ಸಿದ್ಧರಿರಬೇಕು ಎಂಬ ಮೌಲ್ಯ ಇಲ್ಲಿದೆ. ಕರ್ಣ ಹೀಗೆಂದು ಹೇಳುತ್ತಾನೆ–

**4 ಛಲಮನೆ ಮೆರೆವೆಂ ಪದ್ಯಭಾಗದಿಂದ ಕೊಟ್ಟರೆ ಈ ಕೆಳಗಿನಂತೆ ಪ್ರಾರಂಭಿಸಿರಿ–** ಇದು ರನ್ನ ಅವರ **ಛಲಮನೆ ಮೆರೆವೆಂ** ಕವನದ ಒಂದು ಚರಣ. ಇದರಲ್ಲಿ ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ ಕಾರಣ, ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಅದರೆ ದುರ್ಯೋಧನ ಛಲದ ಗುಣವಾಗುಳ್ಳವನು. ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದ, ಯುದ್ಧಮಾಡಿಯೇ ತೀರಬೇಕೆಂಬ ಅವನ 'ಛಲ' ಅವನ ಸ್ವಭಾವಕ್ಕೆ ತಕ್ಕನಾಗಿ ವ್ಯಕ್ತಗೊಂಡಿರುವ ಮಾತು ಇಲ್ಲಿದೆ. ಕವಿ ದುರ್ಯೋಧನ ಸ್ವಭಾವದ ಬಗ್ಗೆ ಹೀಗೆಂದು ಹೇಳುತ್ತಾರೆ–

**5. ಹಲಗಲಿ ಬೇಡರ ಈ ಜನಪದ ಲಾವಣಿಯನ್ನು ಡಾ॥ ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿದು** ಕಂಪನಿ ಸರಕಾರದ ದೌರ್ಜನ್ಯವನ್ನು ವಿರೋಧಿ –ಸುತ್ತಾ 'ಸ್ವಾತಂತ್ರ ಪ್ರೇಮವನ್ನು ಕೆಚ್ಚೆದೆಯ ಹೋರಾಟ'ಇಲ್ಲಿ ಕಾಣಬಹುದು.
**6. ಹಸಿರು** ಪದ್ಯದಲ್ಲಿ ಕವಿ **ಕುವೆಂಪುರವರು** ಕವಿಪ್ರಜ್ಞೆಗೆ 'ಪ್ರಕೃತಿ ಒಲುಮೆಯೇ ಮುಕ್ತಿಯಾನಂದ ಸಾಧನೆಯಾಗುತ್ತದೆ' ಪ್ರಕೃತಿಯೆಂದರೆ ಸಾಕ್ಷತ್ ದೇವರು ಎಂಬುವುದನ್ನು ಈ ಸಾಲುಗಳಲ್ಲಿ ಕಾಣಬಹುದು
7. ವೀರಲವ ಪದ್ಯದ ಕವಿ **ಲಕ್ಷ್ಮೀಶರು** ಇಲ್ಲಿ ಲವನ್ನು ಪಾಮರರೊದಿಗೆ ಜೊತೆಗೂಡಿ ಬೆಳೆದರೂ ಒಕ್ಕಣೆ ಓದಿದಾಗ ಅವನಲ್ಲಿ ಕ್ಷತ್ರಿಯ ಸಹಜ ಗುಣ ಹೇಗೆ ಉದ್ದೀಪನಗೊಂಡಿತ್ತು ಈ ಸಾಲುಗಳಲ್ಲಿ ಕಾಣಬಹುದು.
**8. ಕೆಮ್ಮನೆ ಮೀಸೆವೊತ್ತೆನೆ** ಪದ್ಯವನ್ನು ಕವಿ **ಪಂಪ** ರಚಿಸಿದು,ಇಲ್ಲಿ 'ದ್ರುಪದನಿಗೆ ಅಧಿಕಾರದ ಮದ ಆವರಿಸಿಕೊಂಡು' ತನ್ನ ಸಹಪಾಠಿ ದ್ರೋಣನನ್ನು ಗುರುತಿಸದಾದನು ಆಗ ಅವರಿಬ್ಬರ ನಡೆದ ಸಂಭಾಷಣೆ ಸಾಲು ಇದಾಗಿದೆ.

## 7.ಗಾದೆ ಮಾತು

01*03=03

**ಉದಾಹರಣೆ: 1 1 ಮಾತೇ ಮೃತ್ಯು; ಮಾತೇ ಮುತ್ತು.** 2 ಮಾತು ಬೆಳ್ಳಿ; ಮೌನ ಬಂಗಾರ. **3 ಮಾತು ಮನೆ ಕೆಡಿಸಿತು; ತೂತು ಒಲೆ ಕೆಡಿಸಿತು.** 4 ಊಟಬಲ್ಲವನಿಗೆ ರೋಗವಿಲ್ಲ: ಮಾತು ಬಲ್ಲವನಿಗೆ ಜಗಳವಿಲ್ಲ. **5 ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು.** (ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:)

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; ಮಾತು ಹೇಗಿರಬೇಕು ಹಾಗೂ ಅದರ ಮಹತ್ವವೇನು ಎಂಬುದನ್ನು ತಿಳಿಸುತ್ತದೆ.

* ಮಾನವನು ಮಾತನಾಡುವ ಮತ್ತು ಆಲೋಚನಾ ಶಕ್ತಿಯಿಂದಲೇ ಇತರೆ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಅಂತಹ ಅಮೂಲ್ಯವಾದ ಮಾತನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು. ಹಾಗಲ್ಲದೆ ನಾಲಗೆ ಹರಿದ ಕಡೆಗೆಲ್ಲಾ ಬಿಟ್ಟರೆ 'ಬಾಯಿ ಬಿಟ್ಟರೆ ಬಣ್ಣಗೇಡು' ಎಂಬಂತಾಗುತ್ತದೆ.

ಬಸವಣ್ಣನವರು ಹೇಳಿರುವಂತೆ 'ನುಡಿದರೆ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಸಲಕೆಯಂತೆ' ಇರಬೇಕು. ಅಂದರೆ ನಮ್ಮ ಮಾತು ಇತರರಿಗೆ ನೋವುಂಟು ಮಾಡದಂತೆ ಹಿತ-ಮಿತ-ಮೃದುವಾಗಿರಬೇಕು. ಇಲ್ಲದಿದ್ದರೆ ಅದು ಅನಾಹುತಕ್ಕೂ ಕಾರಣವಾಗುತ್ತದೆ. ಎಂಬುದು ಈ ಗಾದೆಯ ಆಶಯವಾಗಿದೆ.

**ಉದಾಹರಣೆ: 2 1 ದುಡಿಮೆಯೇ ದುಡ್ಡಿನ ತಾಯಿ 2 ಕೈ ಕೆಸರಾದರೆ ಬಾಯಿ ಮೊಸರು** 3 **ಕಾಯಕವೇ ಕೈಲಾಸ 4 ಕೂತು ಉಣ್ಣುವವನಿಗೆ ಕುಡಿಕೆ ಹೊನ್ನೂ ಸಾಲದು.**

**ಈ ಮೇಲಿನ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:**

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; **ದುಡಿಮೆ ಅಥವಾ ದೈಹಿಕ ಶ್ರಮ ಹಾಗೂ ಅದರ ಮಹತ್ವವೇನು** ಎಂಬುದನ್ನು ತಿಳಿಸುತ್ತದೆ.

* ಹನ್ನೆರಡನೆಯ ಶತಮಾನದಲ್ಲೇ ಶಿವಶರಣರು ಕಾಯಕದ ಮಹತ್ವವನ್ನು ಸಾರಿದರು. ಕಾಯಕ ಎಂದರೆ 'ಪ್ರತಿಯೊಬ್ಬ ವ್ಯಕ್ತಿಯು ಏನಾದರೊಂದು ದೈಹಿಕ ಶ್ರಮದ ಮೂಲಕ ಸಂಪಾದನೆ ಮಾಡಿ ಜೀವನ ನಡೆಸಬೇಕು ಸೋಮಾರಿಯಾಗಿ ಕಾಲಕಳೆಯದೆ ಕಷ್ಟಪಟ್ಟು ದುಡಿದು ಬದುಕುವುದರಿಂದ ಹಣ ಸಂಪಾದನೆ ಸಾಧ್ಯ. ಕೂತು ಉಣ್ಣುವವನಿಗೆ ಕುಡುಕೆ ಹೊನ್ನೂ ಸಾಲದು ಎಂಬಂತೆ ಇರುವ ಆಸ್ತಿ ಕರಗಿದ ಮೇಲೆ ಕಷ್ಟ ಪಡಬೇಕಾಗುತ್ತದೆ. ಆದ್ದರಿಂದ ಕಷ್ಟಪಟ್ಟರೆ ಸುಖವಿದೆ ಎಂಬುದು ಈ ಗಾದೆಯ ಆಶಯವಾಗಿದೆ.

**ಉದಾಹರಣೆ:** 3 1 **ಅರಮನೆಗಿಂತ ನೆರಮನೆ ಲೇಸು. 2 ಹಾಸಿಗೆ ಇದ್ದಷ್ಟು ಕಾಲು ಚಾಚು 3 ಅತಿ ಆಸೆ ಗತಿ ಕೆಡಿಸಿತು ಈ ಎಲ್ಲಾ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:**

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; **ನಮ್ಮ ಆಸೆಗಳಿಗೆ ಇತಿ-ಮಿತಿಯಿರಬೇಕು** ಎಂಬುದನ್ನು ತಿಳಿಸುತ್ತದೆ.

* 'ಆಸೆಯೇ ದುಃಖಕ್ಕೆ ಕಾರಣ' ಎಂದು ಬುದ್ಧ ಹೇಳಿದ್ದಾನೆ. ಜೀವನದಲ್ಲ ಆಸೆಯೇ ಇರಬಾರದೆಂದಲ್ಲ ಆದರೆ ಅದು ಅತಿಯಾಗದೆ ಮಿತವಾಗಿರಬೇಕು. ಅರಮನೆಯ ಸುಖಕ್ಕಿಂತ ನಮ್ಮಲ್ಲಿ ಲಭ್ಯವಿರುವಷ್ಟರಲ್ಲಿ ಬದುಕುವುದರಲ್ಲಿ ನೆಮ್ಮದಿ ಇದೆ. ಆಸೆಗಳು ಅತಿಯಾಗಿ ಆದಾಯ ಕಡಿಮೆ ಇದ್ದಾಗ ಸಾಲ ಮಾಡಬೇಕಾಗುತ್ತದೆ. ಆದ್ದರಿಂದ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಉಚಿತವಾಗಿ ಸಿಗುತ್ತದೆಂದು ಅಗತ್ಯಕ್ಕಿಂತ ಹೆಚ್ಚು ಸಂಗ್ರಹಣೆ ಮಾಡು ಪ್ರಯತ್ನಿಸಬಾರದು. ಹಾಗೆ ಮಾಡಿದರೆ 'ಚಿನ್ನದ ಮೊಟ್ಟೆ ಇಡುವ ಕೋಳಿಯ ಕಥೆಯಂತೆ ಅತಿಯಾಸೆಯಿಂದಾಗಿ ಇದ್ದದ್ದನ್ನೂ ಕಳೆದುಕೊಳ್ಳಬೇಕಾಗುತ್ತದೆ. ಎಂಬುದು ಈ ಗಾದೆಯ ಆಶಯವಾಗಿದೆ.

**ಉದಾಹರಣೆ: 4 1 ತಾಳಿದವನು ಬಾಳಿಯಾನು. 2 ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ? ಈ ಗಾದೆಗಳಿಗೆಲ್ಲಾ ಅನ್ವಯಿಸುವ ಒಂದೇ ಉತ್ತರ:**

* ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ.

* ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; **ಅತಿಯಾಗಿ ಕೋಪಮಾಡಿಕೊಳ್ಳದೆ ಸಮಾಧಾನದಿಂದ ಇರಬೇಕು. ಕೋಪ ಅನಾಹುತಕ್ಕೆ ಕಾರಣವಾಗುತ್ತದೆ** ಎಂಬುದನ್ನು ತಿಳಿಸುತ್ತದೆ.

* 'ಕೋಪಂ ಅನರ್ಥ ಸಾಧನಂ' ಎಂಬ ಮಾತಿನಂತೆ ಕೋಪವು ಕೆಡುಕನ್ನು ಉಂಟುಮಾಡುತ್ತದೆ. ಕ್ಷಣಕಾಲ ಕೋಪದ ಕೈಗೆ ಬುದ್ಧಿ ಕೊಟ್ಟರೆ ಅದು ನಮ್ಮನ್ನು ಮಾತ್ರವಲ್ಲದೆ ಅದಕ್ಕೆ ಗುರಿಯಾದ ವರನ್ನೂ ಅಪಾಯಕ್ಕೆ ನೂಕುತ್ತದೆ. ಕುಂಬಾರನು ಹಲವು ದಿನಗಳು ಶ್ರಮ ಪಟ್ಟು ತಯಾರಿಸಿ ಮಡಕೆಯನ್ನು ಒಂದು ದೊಣ್ಣೆಯಿಂದ ನಾಶ ಮಾಡಿದಂತೆ ಕೋಪವು ಅನಾಹುತವನ್ನು ಉಂಟು ಮಾಡುತ್ತದೆ. ಆದರೆ ಅದನ್ನು ಸರಿಪಡಿಸಲಾಗುತ್ತದೆಯೇ? ತಾಳ್ಮೆಯಿಂದ ಆಲೋಚಿಸಿ ಮುನ್ನಡೆದವರೇ ಜೀವನದಲ್ಲಿ ವಿಜಯಶಾಲಿಗಳಾಗಲು ಸಾಧ್ಯ. ಎಂಬುದು ಈ ಗಾದೆಯ ನೀತಿಯಾಗಿದೆ.

**8. ಪತ್ರಲೇಖನ ವ್ಯವಹಾರಿಕ ಪತ್ರಗಳನ್ನು ಮಾತ್ರ ರೂಢಿ ಮಾಡಿಸುವುದು. (ಯಾವುದಾದರು ಒಂದನ್ನು)** (5 ಅಂಕಗಳು)

ಇಂದ,

____________

____________

____________

____________

ಇವರಿಗೆ,

____________

____________

____________

____________

ಮಾನ್ಯರೇ,

ವಿಷಯ : ________________________

________________________

________________________

________________________

________________________

ವಂದನೆಗಳೊಡನೆ

ಸ್ಥಳ :

ತಮ್ಮ ನಂಬುಗೆಯ

( )

ದಿನಾಂಕ :

| ಹೊರ ವಿಳಾಸ ಇಂದ, | ಇವರಿಗೆ, |
| --- | --- |
| ____________ | ____________ |
| ____________ | ____________ |
| ____________ | ____________ |
| ____________ | ____________ |

**9. ಪ್ರಬಂಧ ರಚನೆ (ರೂಢಿ ಮಾಡಿಸುವುದು.)** (5 ಅಂಕಗಳು)

**ಪ್ರಬಂಧಗಳನ್ನು ವಿಷಯದ ಆಧಾರದ ಮೇಲೆ ಎರಡು ವಿಧಗಳಾಗಿ ವಿಂಗಡಿಸಬಹುದು: 1) ಸಮಸ್ಯಾತ್ಮಕ ವಿಷಯದ ಪ್ರಬಂಧಗಳು 2)ಉಪಯುಕ್ತತಾ ವಿಷಯದ ಪ್ರಬಂಧಗಳು**

**1) ಸಮಸ್ಯಾತ್ಮಕ ವಿಷಯದ ಪ್ರಬಂಧಗಳು:**

* **ಸಾಮಾಜಿಕ ಪಿಡುಗುಗಳು:** ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ ಇತ್ಯಾದಿ
* **ದೇಶ/ಪ್ರಕೃತಿಯ ಸಮಸ್ಯೆಗಳು:** ಜನಸಂಖ್ಯಾ ಸ್ಫೋಟ, ವಿವಿಧ ಪರಿಸರ ಮಾಲಿನ್ಯಗಳು(ಜಲ, ವಾಯು, ಭೂ)

**ಸಮಸ್ಯಾತ್ಮಕ ವಿಷಯದ ಪ್ರಬಂಧಗಳ ನಮೂನೆ**

ಸಮಸ್ಯಾತ್ಮಕ ವಿಷಯದ ಪ್ರಬಂಧಗಳನ್ನು ಬರೆಯುವಾಗ ಈ ಕೆಳಗಿನ ಸಾಮಾನ್ಯ ಅಂಶಗಳನ್ನು ಪಾಲಿಸಬೇಕು.

**ಪೀಠಿಕೆ:** (ಅರ್ಥ ಅಥವಾ ವ್ಯಾಖ್ಯಾನ ಬರೆಯಬೇಕು)

**ವಿಷಯಬೆಳವಣಿಗೆ:** ಕಾರಣಗಳು, ಪರಿಣಾಮಗಳು, ಪರಿಹಾರಗಳನ್ನು ಹಂತಹಂತವಾಗಿ ಬರೆಯಬೇಕು

**ಉಪಸಂಹಾರ:** ಇದನ್ನು ತಡೆಗಟ್ಟಲು ವಿದ್ಯಾರ್ಥಿಗಳ ಪಾತ್ರವೇನೆಂಬುದನ್ನು ಬರೆಯಬೇಕು.

**2) ಉಪಯುಕ್ತತಾ ವಿಷಯದ ಪ್ರಬಂಧಗಳು:**

* **ಉಪಯೋಗಗಳು:** ಸಮೂಹಮಾಧ್ಯಮಗಳು (ಕಂಪ್ಯೂಟರ್, ದೂರದರ್ಶನ, ದಿನಪತ್ರಿಕೆ ಇತ್ಯಾದಿ)
* **ಮಹತ್ವಗಳು:** ಕ್ರೀಡೆ, ಮಳೆ ನೀರು ಕೊಯ್ಲು, ಸಾವಯವ ಬೇಸಾಯ, ಸ್ವಚ್ಛಭಾರತ ಅಭಿಯಾನ

**ಉಪಯುಕ್ತತಾ ವಿಷಯದ ಪ್ರಬಂಧಗಳ ನಮೂನೆ**

ಉಪಯುಕ್ತತಾ ವಿಷಯದ ಪ್ರಬಂಧಗಳನ್ನು ಬರೆಯುವಾಗ ಈ ಕೆಳಗಿನ ಸಾಮಾನ್ಯ ಅಂಶಗಳನ್ನು ಪಾಲಿಸಬೇಕು.

**ಪೀಠಿಕೆ:** (ಅರ್ಥ ಅಥವಾ ವ್ಯಾಖ್ಯಾನ ಬರೆಯಬೇಕು)

**ವಿಷಯಬೆಳವಣಿಗೆ:** ಮಹತ್ವ, ಉಪಯೋಗಗಳು, ಅನುಕೂಲಗಳು, ಬಳಕೆಯ ವಿಧಾನ, ಜನಪ್ರಿಯತೆ ಇತ್ಯಾದಿ
ವಿಷಯಗಳನ್ನು ವಿವರಿಸಬೇಕು. ಅನುಕೂಗಳ ಬಗ್ಗೆ ಇದ್ದಲ್ಲ ಅನನುಕೂಗಳನ್ನು ಬರೆಯಬೇಕು.

**ಉಪಸಂಹಾರ:** ಉಳಿಸುವಿಕೆ/ಬಳಕೆ/ಜಾರಿ ಮುಂತಾದವುಗಳಲ್ಲಿ ವಿದ್ಯಾರ್ಥಿಗಳ ಪಾತ್ರವೇನೆಂಬುದನ್ನು ಬರೆಯಬೇಕು.

ಉದಾಹರಣೆ: 1 **ಬಾಲಕಾರ್ಮಿಕ ಪದ್ಧತಿ** (ಇತರ ಯಾವುದೇ ಸಾಮಾಜಿಕ ಪಿಡುಗು)

**ಪೀಠಿಕೆ:** ಇದು ಒಂದು ಸಾಮಾಜಿಕ ಸಮಸ್ಯೆಯಾಗಿದೆ/ಪಿಡುಗಾಗಿದೆ. **5 ರಿಂದ 16 ವರ್ಷವಯಸ್ಸಿನ ಒಳಗೆ ದುಡಿಯುವ ಮಕ್ಕಳನ್ನು 'ಬಾಲಕಾರ್ಮಿಕರು' ಎನ್ನುವರು**. ಇದು ಸಮಾಜದ, ಸಮುದಾಯದ ಹಾಗೂ ಒಂದು ದೇಶದ ಏಳಿಗೆಗೆ ಧಕ್ಕೆ ತರುವ ಅಂಶವಾಗಿದೆ.

**ವಿಷಯಬೆಳವಣಿಗೆ: ಬಾಲಕಾರ್ಮಿಕ ಪದ್ಧತಿ ಜಾರಿಯಲ್ಲಿರುವುದಕ್ಕೆ** ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಇತರೆ ಹಲವಾರು ಕಾರಣಗಳನ್ನು ಹೊಂದಿದ್ದು ಸಮಾಜದ ಮೇಲೆ ಹಲವಾರು ಪರಿಣಾಮಗಳನ್ನು ಉಂಟುಮಾಡುತ್ತದೆ.

**ಕಾರಣಗಳು: ಬಾಲಕಾರ್ಮಿಕ ಪದ್ಧತಿ ಜಾರಿಯಲ್ಲಿರುವುದಕ್ಕೆ** ಪ್ರಮುಖ ಕಾರಣಗಳೆಂದರೆ:

* ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿರುವುದು ಅಥವಾ ಅತಿಯಾದ ಬಡತನ, ನಿರುದ್ಯೋಗ.
* ಪೋಷಕರು ಅನಕ್ಷರಸ್ಥರಾಗಿದ್ದು ಶಿಕ್ಷಣದ ಬಗ್ಗೆ ಕಾಳಜಿ ಇಲ್ಲದಿರುವುದು.
* ಪೋಷಕರು ವೃದ್ಧರಾಗಿರುವುದು ಅಥವಾ ಅನಾರೋಗ್ಯ ಹೊಂದಿರುವುದು.

**ಪರಿಣಾಮಗಳು: ಬಾಲಕಾರ್ಮಿಕ ಪದ್ಧತಿ**ಯಿಂದ ಉಂಟಾಗಬಹುದಾದ ಪ್ರಮುಖ ಪರಿಣಾಮಗಳೆಂದರೆ:

* ಶಿಕ್ಷಣದಿಂದ ವಂಚಿತರಾಗುವುದು.
* ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೆ ತುತ್ತಾಗುವುದು.
* ದೇಶಕ್ಕೆ ಉತ್ತಮ ನೈತಿಕ ಹಾಗೂ ಸದೃಢ ಪ್ರಜೆಗಳ ಕೊರತೆ ಉಂಟಾಗುವುದು.

* ಪರಿಣಾಮವಾಗಿ ಸಮಾಜದ, ದೇಶದ ಪ್ರಗತಿಯಲ್ಲಿ ಹಿನ್ನಡೆ ಉಂಟಾಗುವುದು.

**ಪರಿಹಾರಗಳು: ಬಾಲಕಾರ್ಮಿಕ ಪದ್ಧತಿ** ತಡೆಗಟ್ಟಲು ಪ್ರಮುಖ ಪರಿಹಾರೋಪಾಯಗಳೆಂದರೆ:

* ಇಂತಹ ಪಿಡುಗು/ಸಮಸ್ಯೆಗಳನ್ನು ತಡೆಗಟ್ಟಲು ಕಟ್ಟುನಿಟ್ಟಾದ ಕಾನೂನು ಜಾರಿಗೊಳಿಸಬೇಕು.
* ಗಂಡು–ಹೆಣ್ಣು ಭೇದವಿಲ್ಲದೆ ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ಶಿಕ್ಷಣ ದೊರೆಯುವಂತಾಗಬೇಕು.
* ಆರ್ಥಿಕವಾಗಿ ಹಿಂದುಳಿದ ಕುಟುಂಬಗಳನ್ನು ಗುರುತಿಸಿ ಅವರನ್ನು ಆರ್ಥಿಕವಾಗಿ ಸಬಲಗೊಳಿಸಬೇಕು.

**ಉಪಸಂಹಾರ:** ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ, ವಿದ್ಯಾರ್ಥಿಗಳಾದ ನಾವು ಬೀದಿನಾಟಕ, ಹಳ್ಳಿಹಳ್ಳಿಗಳಲ್ಲಿ ಜಾಗೃತಿ ಜಾಥಾ ಮುಂತಾದವುಗಳ ಮೂಲಕ ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ದೇಶದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕು.

*****

**[ಸೂಚನೆ: * ಮೇಲಿನ ಪ್ರಬಂಧವು ಯಾವುದೇ ಸಾಮಾಜಿಕ ಪಿಡುಗಿಗೆ ಅನ್ವಯವಾಗುತ್ತದೆ.* ಇದು ಕಲಿಕೆಯಲ್ಲಿ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಮಾತ್ರ.* ಇದೇ ಪ್ರಬಂಧವನ್ನು ಯಥಾವತ್ತಾಗಿ ಕಲಿಸಿದರೆ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ.*** [ಈ ಪ್ರಬಂಧದಲ್ಲಿ ಗೆರೆ ಎಳೆಯಲಾದ ಪದ/ವಾಕ್ಯವನ್ನು ಮಾತ್ರ ಬದಲಿಸಿದರೆ ಸಾಕು.* **ವಿಷಯವನ್ನಾಧರಿಸಿ ಇನ್ನೂ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಹೆಚ್ಚುವರಿ ಅಂಶಗಳನ್ನು ಸೇರಿಸಿ ಉತ್ತಮ ವಿದ್ಯಾರ್ಥಿಗಳಿಗೂ ಕಲಿಸಬಹುದು.]**

ಉದಾಹರಣೆ: 2 **ಪರಿಸರ ಮಾಲಿನ್ಯ** (ಯಾವುದೇ ವಿಧದ ಮಾಲಿನ್ಯ)

**ಪೀಠಿಕೆ:** ಇಡೀ ಪ್ರಪಂಚದಲ್ಲಿ **ಪರಿಸರ ಮಾಲಿನ್ಯ** ಇಂದು ಒಂದು ದೊಡ್ಡ ಸಮಸ್ಯೆಯಾಗಿದೆ. **ಪರಿಸರದಲ್ಲಿ ಉಂಟಾಗುವ ಯಾವುದೇ ಅನಪೇಕ್ಷಿತ ಬದಲಾವಣೆಗಳನ್ನು ಪರಿಸರಮಾಲಿನ್ಯ ಎನ್ನುವರು.** ಇದು ಸಮಾಜದ, ಸಮುದಾಯದ ಹಾಗೂ ಒಂದು ದೇಶದ ಏಳಿಗೆಗೆ ಧಕ್ಕೆ ತರುವ ಅಂಶವಾಗಿದೆ.

**ವಿಷಯಬೆಳವಣಿಗೆ: ಪರಿಸರ ಮಾಲಿನ್ಯಕ್ಕೆ** ಪ್ರಕೃತಿ ಹಾಗೂ ಮನುಷ್ಯನ ಹಲವಾರು ಚಟುವಟಿಕೆಗಳು ಕಾರಣವಾಗಿದ್ದು ಇಂದು ಇದರ ಪರಿಣಾಮವಾಗಿ ಅನೇಕ ಸಮಸ್ಯೆಗಳು ಎದುರಾಗುತ್ತಿವೆ.

**ಕಾರಣಗಳು: ಪರಿಸರ ಮಾಲಿನ್ಯಕ್ಕೆ** ಪ್ರಮುಖ ಕಾರಣಗಳೆಂದರೆ:

* ಹೆಚ್ಚುತ್ತಿರುವ ಜನಸಂಖ್ಯೆ. ದಿನೇ ದಿನೇ ನಗರ–ಪಟ್ಟಣಗಳು ಬೆಳೆಯುತ್ತಿರುವುದು.
* ಹೆಚ್ಚುತ್ತಿರುವ ಕಾರ್ಖಾನೆಗಳು, ವಾಹನಗಳು.
* ಕೃಷಿಯಲ್ಲಿ ಹೆಚ್ಚು ಹೆಚ್ಚು ರಾಸಾಯನಿಕಗಳ ಬಳಕೆ.
* ಅರಣ್ಯನಾಶದಿಂದ ಮಳೆ ಹಾಗೂ ನೀರಿನ ಮೂಲಗಳು ಕಡಿಮೆಯಾಗುತ್ತಿರುವುದು.

**ಪರಿಣಾಮಗಳು: ಪರಿಸರ ಮಾಲಿನ್ಯ** ದಿಂದ ಉಂಟಾಗಬಹುದಾದ ಪ್ರಮುಖ ಪರಿಣಾಮಗಳೆಂದರೆ:

* ಮಾನವನಿಗೆ ಅನೇಕ ಮಾರಣಾಂತಿಕ ರೋಗಗಳು ಉಂಟಾಗುತ್ತವೆ.
* ವಾತಾವರಣದಲ್ಲಿ ಶುದ್ಧ **ವಾಯು, ಜಲದ** ಕೊರತೆ ಹಾಗೂ ಓಝೋನ್ ಪದರದ ನಾಶ.
* ಅರಣ್ಯನಾಶದಿಂದ ವನ್ಯಮೃಗಗಳ ನಾಶ. ಮಳೆಯ ಕೊರತೆಯಿಂದ ಬರಗಾಲ.
* ಪರಿಣಾಮವಾಗಿ ಸಮಾಜದ, ದೇಶದ ಪ್ರಗತಿಯಲ್ಲಿ ಹಿನ್ನಡೆ ಉಂಟಾಗುವುದು.

**ಪರಿಹಾರಗಳು: ಪರಿಸರ ಮಾಲಿನ್ಯ** ತಡೆಗಟ್ಟಲು ಪ್ರಮುಖ ಪರಿಹಾರೋಪಾಯಗಳೆಂದರೆ:

* ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟುವುದು. ನಗರೀಕರಣಕ್ಕೆ ಸಾಧ್ಯವಾದಷ್ಟು ತಡೆಯೊಡ್ಡುವುದು.
* ಕಾರ್ಖಾನೆಗಳನ್ನು ಪರಿಸರ ಸ್ನೇಹಿಯಾಗಿಸುವುದು. ಇದಕ್ಕಾಗಿ ಕಾನೂನು ಜಾರಿಗೊಳಿಸುವುದು.
* ಅರಣ್ಯನಾಶವನ್ನು ತಡೆಗಟ್ಟಿ, ಗಿಡ–ಮರಗಳನ್ನು ನೆಟ್ಟು ಬೆಳೆಸಲು ಪ್ರೋತ್ಸಾಹಿಸುವುದು.
* ವಿವಿಧ ಮೂಲಗಳಲ್ಲಿ ನೀರಿನ ಪ್ರಮಾಣ ತಗ್ಗದಂತೆ ಹಾಗೂ ಮಿತವಾಗಿ ಬಳಸುವಂತೆ ಮಾಡುವುದು.

**ಉಪಸಂಹಾರ:** ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ, ವಿದ್ಯಾರ್ಥಿಗಳಾದ ನಾವು ಬೀದಿನಾಟಕ, ಹಳ್ಳಿಹಳ್ಳಿಗಳಲ್ಲಿ ಜಾಗೃತಿ ಜಾಥಾ ಮುಂತಾದವುಗಳ ಮೂಲಕ ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ದೇಶದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕು.

**[ಸೂಚನೆ: * ಮೇಲಿನ ಪ್ರಬಂಧವು ಯಾವುದೇ ಪರಿಸರ ಮಾಲಿನ್ಯಕ್ಕೆ ಅನ್ವಯವಾಗುತ್ತದೆ. * ಇದು ಕಲಿಕೆಯಲ್ಲಿ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಮಾತ್ರ. * ಇದೇ ಪ್ರಬಂಧವನ್ನು ಯಥಾವತ್ತಾಗಿ ಕಲಿಸಿದರೆ ಹಿಂದುಳಿದ ಹಾಗೂ ಸಾಧಾರಣ ಕಲಿಕೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ. * ಈ ಪ್ರಬಂಧದಲ್ಲಿ ಗೆರೆ ಎಳೆಯಲಾದ ಪದ/ವಾಕ್ಯವನ್ನು ಮಾತ್ರ ಬದಲಿಸಿದರೆ ಸಾಕು. * ವಿಷಯವನ್ನಾಧರಿಸಿ ಇನ್ನೂ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಹೆಚ್ಚುವರಿ ಅಂಶಗಳನ್ನು ಸೇರಿಸಿ ಉತ್ತಮ ವಿದ್ಯಾರ್ಥಿಗಳಿಗೂ ಕಲಿಸಬಹುದು.]**

ಉದಾಹರಣೆ: 3 **ಶಿಕ್ಷಣದಲ್ಲಿ ಕಂಪ್ಯೂಟರ್ ತಂತ್ರಜ್ಞಾನ** (ಯಾವುದೇ ವಿಧದ ಉಪಯುಕ್ತತೆಯ ವಿಷಯದ ಪ್ರಬಂಧಗಳಿಗೆ)

**ಪೀಠಿಕೆ:** ಇಂದು ವಿಜ್ಞಾನ ಮತ್ತು ತಂತ್ರಜ್ಞಾನವಿಲ್ಲದೆ ಜಗತ್ತು ನಿಶ್ಚಿಎನ್ನುವಷ್ಟು ನಾವು ಅವಲಂಬಿತರಾಗಿದ್ದೇವೆ. ವೃತ್ತಪತ್ರಿಕೆಗಳು, ದೂರದರ್ಶನ, ಕಂಪ್ಯೂಟರ್, ಅಂತರ್ಜಾಲ ಮುಂತಾದವು ಇಂದು ಬಹುಮುಖ್ಯ ಸಮೂಹ ಮಾಧ್ಯಮಗಳಾಗಿವೆ. ಈ ನಿಟ್ಟಿನಲ್ಲಿ ಇಂದು **ಶಿಕ್ಷಣದಲ್ಲಿ ಕಂಪ್ಯೂಟರ್ ತಂತ್ರಜ್ಞಾನ** ಅತ್ಯವಶ್ಯಕವಾಗಿದೆ.

**ವಿಷಯಬೆಳವಣಿಗೆ: ಕಂಪ್ಯೂಟರ್** ಇಂದು ಎಲ್ಲೆಂದರಲ್ಲಿ ತನ್ನ ಪ್ರಭಾವವನ್ನು ಬೀರಿದ್ದು ಇಂದು ಬಹಳ ಅತ್ಯವಶ್ಯಕ ಮಾಧ್ಯಮವಾಗಿ ಪ್ರಸಿದ್ಧವಾಗಿದೆ. ಪರಿಣಾಮಕಾರಿಯಾದ **ಶಿಕ್ಷಣ ಪಡೆಯುವಲ್ಲಿ ಕಂಪ್ಯೂಟರ್** ಹಲವಾರು ಅನುಕೂಲತೆಯನ್ನು ಕಲ್ಪಿಸಿದೆ.

**ಶಿಕ್ಷಣದಲ್ಲಿ ಕಂಪ್ಯೂಟರ್ ತಂತ್ರಜ್ಞಾನ ಉಪಯೋಗಗಳೆಂದರೆ:**

* **ಕಂಪ್ಯೂಟರ್ ಪರಿಣಾಮಕಾರಿಯಾದ ಕಲಿಕೆಗೆ** ಸಹಕಾರಿಯಾಗಿದೆ. * **ಅಮೂರ್ತವಾದ ಪರಿಕಲ್ಪನೆಗಳನ್ನು ಕಣ್ಣಿಗೆ ಕಟ್ಟಿದಂತೆ ನೋಡಿ, ಕೇಳಿ ಕಲಿಯಬಹುದು.**

* **ಅಂತರ್ಜಾಲ ಬಳಸಿ ಹೊಸ ವಿಷಯಗಳನ್ನು ಶೀಘ್ರವಾಗಿ ಪಡೆಯಲು, ಕಲಿಯಲು** ಸಹಕಾರಿಯಾಗಿದೆ. * **ಓದಿದ ವಿಷಯಗಳನ್ನು ಟಿಪ್ಪಣಿ ಮಾಡಿ ಶಾಶ್ವತವಾಗಿ ಉಳಿಸಿಕೊಳ್ಳಲು** ಸಹಕಾರಿಯಾಗಿದೆ.

* ಸ್ಪರ್ಧಾತ್ಮಕ ಯುಗದಲ್ಲಿ **ಕಂಪ್ಯೂಟರ್ ಬಳಕೆ ಹೆಚ್ಚಿರುವುದರಿಂದ** ಇದರ ಬಳಕೆ ಉಪಯುಕ್ತವಾಗಿದೆ.

**ಕಂಪ್ಯೂಟರ್ ತಂತ್ರಜ್ಞಾನದ ಬಳಕೆಯ ಅನನುಕೂಲಗಳು:** ಇದರ ಪ್ರಮುಖ ಅನನುಕೂಲಗಳೆಂದರೆ:

* ಇದರಲ್ಲ ಅನಪೇಕ್ಷಿತ ವಿಷಯಗಳಿಗೆ ಅವಕಾಲಿವಿರುವುದರಿಂದ ನೈತಿಕತೆಗೆ ಧಕ್ಕೆ ಉಂಟಾಗಬಹುದು. * ಇದು ಬಳಕೆಯ ಪೂರ್ವಜ್ಞಾನವನ್ನು ಬಯಸುವುದರಿಂದಲೆಲ್ಲರೂ ಬಳಸಲು ಸಾಧ್ಯವಿಲ್ಲ.

* **ಪುಸ್ತಕಗಳನ್ನು ಓದುವ ಹವ್ಯಾಸ ತಪ್ಪುವ** ಸಾಧ್ಯತೆ ಹೆಚ್ಚು. * **ಇದು ವಿದ್ಯುತ್ ಅಲ್ಲದೆ ಹಲವಾರು ಸಾಧನಗಳನ್ನು ಅಪೇಕ್ಷಿಸುತ್ತದೆ.**

**ಉಪಸಂಹಾರ:** ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ, ವಿದ್ಯಾರ್ಥಿಗಳಾದ ನಾವು **ವಿಜ್ಞಾನ–ತಂತ್ರಜ್ಞಾನವನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು** ನಮ್ಮ ಜೀವನ ಏಳ್ಗೆ ಆ ಮೂಲಕ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕು.

**10. ಗದ್ಯ ಪದ್ಯ ಪಾಠಗಳ (ಕತೆ ರೂಪದಲ್ಲಿ ವಿವರಿಸುವುದು / ಕತೆ ಕಟ್ಟುವುದು)** (16/18 ಅಂಕಗಳು)

**1.ಯುದ್ಧ 2. ಶಬರಿ 3.ವೃಕ್ಷಸಾಕ್ಷಿ 4.ವ್ಯಾಘ್ರಗೀತೆ 1. ಹಲಗಲಿ ಬೇಡರು 2. ಕೌರವೇಂದ್ರನ ಕೊಂದೆ ನೀನು 3. ಛಲಮನೆ ಮೆರೆವೆಂ 4. ವೀರಲವ 5. ಕೆಮ್ಮನೆ ಮೀಸೆವೊತ್ತನೇ**

**(ಈ ಮೇಲಿನ ಗದ್ಯ ಮತ್ತು ಪದ್ಯ ಪಾಠಗಳ ಎಲ್ಲಾ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವಂತೆ ವಿದ್ಯಾರ್ಥಿಗಳನ್ನು ಅಣಿಗೊಳಿಸುವುದು.)**

| ಕ್ರಸಂ | ಪ್ರಶ್ನಾವಾರು / ವಿಷಯವಾರು | ನಿಗದಿತ ಅಂಕ | ಪಡೆಯುವ ಅಂಕ |
|---|---|---|---|
| 1 | **ಕವಿ ಪರಿಚಯ** | **6** | **6** |
| 2 | **ವ್ಯಾಕರಣಾಂಶಗಳು** | **14** | **6** |
| 3 | **ಕಂಠಪಾಠ** | **4** | **4** |
| 4 | **ಮೌಲ್ಯಾಧರಿತ ಸಾರಾಂಶಕ್ಕೆ** | **4** | **4** |
| 5 | **ಗಾದೆ ಮಾತು** | **3** | **3** |
| 6 | **ಪ್ರಸ್ತಾರ ಹಾಕುವುದು** | **3** | **2** |
| 7 | **ಅಲಂಕಾರ** | **3** | **5** |
| 8 | **ಪತ್ರಲೇಖನ** | **5** | **5** |
| 9 | **ಪ್ರಬಂಧ** | **5** | 3 |
| 10 | **ಗದ್ಯ/ಪದ್ಯ ಪಾಠಗಳು (ಕಥನ ರೂಪದಲ್ಲಿ)** | **16/18** | **8/8** |
| **ಒಟ್ಟು** | | **81** | **50+** |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಶ್ರೀ ತಾಯಣ್ಣ .ಎಮ್. ಸ.ಶಿ 9986270203